ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು**

ಸಂಖ್ಯೆ: ಸಿ.ಎಸ್1/ಗ.ಶಾ/ಎಸ್.ಎಸ್.ಎಲ್.ಸಿ/ಶಾ.ಕೋ.ಬ/01/2021-22 ದಿನಾಂಕ: 01/09/2021

**- ಸುತ್ತೋಲೆ -**

ವಿಷಯ : ಹೊಸ ಶಾಲಾ ಸಂಕೇತ ಪಡೆದಿರುವ ಶಾಲೆಗಳ ಪುನರಾವರ್ತಿತ ವಿದ್ಯಾರ್ಥಿಗಳ ಡೇಟಾವನ್ನು ಹಳೆಯ ಶಾಲಾ ಸಂಕೇತದಿಂದ ಹೊಸ ಶಾಲಾ ಸಂಕೇತಕ್ಕೆ ವರ್ಗಾಯಿಸುವ ಬಗ್ಗೆ

********

ರಾಜ್ಯದ ಕೆಲವು ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು ಹಳೆಯ ವಿಳಾಸದಿಂದ ಹೊಸ ವಿಳಾಸಕ್ಕೆ ಸ್ಥಳಾಂತರಗೊಂಡಿದ್ದು ಅಥವಾ ನೂತನ ಜಿಲ್ಲೆಯ ರಚನೆಯ ಕಾರಣದಿಂದ ಅಥವಾ ಒಂದು ತಾಲ್ಲೂಕಿನಿಂದ ಬೇರೆ ತಾಲ್ಲೂಕಿಗೆ ಶಾಲೆ ಸೇರ್ಪಡೆಗೊಂಡಾಗ ಮಂಡಳಿಯಿಂದ ನೂತನ ಶಾಲಾ ಕೋಡ್ ಪಡೆದುಕೊಂಡಿವೆ. ಆದರೆ ಸದರಿ ಶಾಲೆಗಳ 2003 ರಿಂದ 2010ರವರೆಗಿನ ಪುನರಾವರ್ತಿತ ವಿದ್ಯಾರ್ಥಿಗಳ ಮಾಹಿತಿಯಲ್ಲಿ ಹಳೆಯ ಶಾಲಾ ಕೋಡ್ ನಮೂದಿತವಾಗಿದೆ. ಇಂತಹ ಶಾಲೆಗಳನ್ನು ಹೊಸ ಕೋಡ್‌ನೊಂದಿಗೆ ಸಮನ್ವಯಗೊಳಿಸಲಾಗುತ್ತಿದೆ. 2015ರ ನಂತರದ ಈ ರೀತಿಯ ಬದಲಾವಣೆಗಳನ್ನು ಪೂರ್ಣವಾಗಿ ಸಮನ್ವಯಗೊಳಿಸಲಾಗಿದೆ. ಆದಾಗ್ಯೂ ಕೆಲವು ಶಾಲೆಗಳಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳು ಇತ್ತೀಚಿಗೆ ಪರೀಕ್ಷೆಗೆ ನೋಂದಾಯಿಸಿಲ್ಲವಾದ್ದರಿಂದ ಹಳೆಯ ಶಾಲಾ ಸಂಕೇತವನ್ನು ಹೊಸ ಶಾಲಾ ಸಂಕೇತದೊಂದಿಗೆ ಜೋಡಿಸುವುದು ಬಾಕಿಯಿದೆ.

ಆದ್ದರಿಂದ 2003ಕ್ಕಿಂತ ಹಿಂದಿನ ಅಥವಾ 2003 ರಿಂದ 2010ರವರೆಗಿನ ಪುನರಾವರ್ತಿತ ವಿದ್ಯಾರ್ಥಿಗಳ ನೋಂದಣಿಯಲ್ಲಿ ಹೊಸ ಶಾಲಾ ಸಂಕೇತವನ್ನು ಬಳಸಬೇಕಾಗುತ್ತದೆ. ಹಳೆಯ ಶಾಲಾ ಸಂಕೇತದಲ್ಲಿ ನೋಂದಣಿ ಸಾಧ್ಯವಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಮುಖ್ಯ ಶಿಕ್ಷಕರು ಮನವಿಗಳನ್ನು ಭೌತಿಕವಾಗಿ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಹಾಗೂ ಕೆಳಕಂಡ ಇ-ಮೇಲ್ ವಿಳಾಸಕ್ಕೆ ಕಳುಹಿಸಿಕೊಡಲು ತಿಳಿಸಿದೆ.

ಇ-ಮೇಲ್ ವಿಳಾಸ: sadpi-cc-kseeb@ka.gov.in

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು

ಸೂಕ್ತ ಕ್ರಮಕ್ಕಾಗಿ :

1) ರಾಜ್ಯದ ಎಲ್ಲಾ ಸರ್ಕಾರಿ, ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ ಶಾಲಾ ಲಾಗಿನ್ ಮುಖಾಂತರ